22

# ಮರಣ

ಮರಣವು ನಿರಾಶಾದಾಯಕವಾದ ವಿಷಯವಾಗಿದೆ. ಆದರೆ ಅದನ್ನು ಎದುರಿಸಲೇ ಬೇಕಾಗುತ್ತದೆ. ತನ್ನ ಎದುರಿನಲ್ಲಿ ಮರಣದ ಬಗ್ಗೆ ಹೇಳುವವದಕ್ಕೆ ಅಪ್ಪಣೆ ಕೊಡುವ ಒಬ್ಬ ಮನುಷ್ಯನ ಬಗ್ಗೆ ಕೇಳಿದ್ದೇನೆ. ಅದರ ಯಾವುದೇ ಸೂಚನೆಯೊಂದಿಗೆ ಸಂಬಂಧಿಸಿದ ಎಲ್ಲವನ್ನೂ ತಪ್ಪಿಸಿಕೊಳ್ಳುವದಕ್ಕೆ ಪ್ರಯತ್ನ ಮಾಡಿದನು. ಆದರೆ ಅದು ಅವನನ್ನು ಸಾಯುವದರಿಂದ ತಪ್ಪಿಸಲಿಲ್ಲ. ಮರಣವು ಕೇವಲ ಒಂದು ನಾಟಕವೆಂದು ಸೂಚಿಸಿ ಬರೆಯಲ್ಪಟ್ಟ ಎಲ್ಲಾ ಪದ್ಯಗಳೂ ಹಾಡುಗಳೂ ಇದ್ದಾಗ್ಯೂ ಅದಕ್ಕೆ ಒಂದು ಕೊಂಡಿಯಿರುವುದು. ಅದು ಭಯಂಕರವಾದ ವಾಸ್ತವಿಕತೆಯಾಗಿದೆ. ಅದರೊಂದಿಗಿನ ಸಂಬಂಧವನ್ನು ನಾವು ತಪ್ಪಿಸಿ ಕೊಳ್ಳಲಾರೆವು. ಅದು ನಮ್ಮ ಜೀವನದ ಮೇಲೆ ಬರೆಯಲ್ಪಟ್ಟಿದೆ. ದೈಹಿಕ ಮರಣದ ವಿಷಯದ ಮೇಲೆ ನಮ್ಮ ಅಧ್ಯಯನವನ್ನು ನೇಮಿತಗೊಳಿಸಲು ನಾವು ಬಯಸುವದಿಲ್ಲ. ಪರಿಶುದ್ಧ ಬರಹಗಳಲ್ಲಿ ಈ ಪದಕ್ಕೆ ಇರುವ ವಿಶಾಲ ಅರ್ಥವನ್ನು ನಾವು ಗಮನಿಸುವೆವು.

## ಎಲ್ಲರೂ ಒಂದು ಸಲ ಮರಣ ಹೊಂದಿದ್ದಾರೆ

ಎಲ್ಲಾ ಜನರು ಒಂದು ಸಲ ಸತ್ತು ಹೋಗಿದ್ದಾರೆ. ಯಾವಾಗ ಮತ್ತು ಹೇಗೆ ಇದು ಸಂಭವಿಸಿತು? ಒಬ್ಬನು ಪಾಪಿಯಾಗುವಾಗ ಅವನು ದೇವರ ದೃಷ್ಟಿಯಲ್ಲಿ ನಶಿಸು ಹೋಗುತ್ತಾನೆ. ಪಾಪವು ಮರಣವನ್ನು ಉತ್ಪಾದಿಸುತ್ತದೆ (ಯಾಕೋಬ 1:15). ಪಾಪದಲ್ಲಿ ಜೀವಿಸುವುದು ಅಂದರೆ ಸತ್ತು ಹೋಗುವುದಾಗಿದೆ (1 ತಿಮೊಥೆ 5:6). ಎಲ್ಲರೂ ಪಾಪ ಮಾಡಿದ್ದರಿಂದ (ರೋಮಾಪುರ 3:23), ನಾವೆಲ್ಲರೂ ಈ ಅರ್ಥದಲ್ಲಿ ಸತ್ತು ಹೋಗಿದ್ದೇವೆ.

ಇದು ಶಿಶುಗಳನ್ನು ಇಲ್ಲವೇ ಚಿಕ್ಕಮಕ್ಕಳನ್ನು ಒಳಗೊಂಡಿರುವದಿಲ್ಲ. ಆದರೆ ತನ್ನ ಕಾರ್ಯಗಳಿಗೆ ಜವಾಬ್ದಾರಿಕೆಯುಳ್ಳ ಮತ್ತು ಲೆಕ್ಕಾ ಕೊಡಬೇಕಾದ ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯಿಸುತ್ತದೆ. ಶಿಶುಗಳು ಪಾಪದಲ್ಲಿ ಸತ್ತವುಗಳಾಗಿ ಜನಿಸಿವೆ ಎಂದು ಕೆಲವರು ಬೋಧಿಸಿದ್ದಾರೆ. ಬೈಬಲು ಅದನ್ನು ಬೋಧಿಸುವದಿಲ್ಲ. "ಪಾಪ ಮಾಡುವವನೆ ಸಾಯುವನು" (ಯೆಹೆಜ್ಕೇಲ 18:4) ಎಂದು ನಾವು ಓದುತ್ತೇವೆ.

ಬೈಬಲಿನಲ್ಲಿ ಕಂಡುಬರುವ ಪಾಪದ ನಿರೂಪಣೆಯು (1 ಯೋಹಾನ 3:4; ಯಾಕೋಬ 4:17) ಅದು ನಾವು ಮಾಡುವಂಥದ್ದು ಇಲ್ಲವೇ ಮಾಡದಿರುವಂಥದ್ದು ಆಗಿರುತ್ತದೆ; ಆದರೆ ನಾವು ಬಾಧ್ಯವಾಗಿ ಹೊಂದುವಂಥದ್ದಾಗಿರುವದಿಲ್ಲ ಎಂದು ತೋರಿಸುತ್ತದೆ. ಈ ಮರಣವು ಯಾವಾಗ ಸಂಭವಿಸುತ್ತದೆ ಎಂಬ ಯಾವುದೇ ನಿಶ್ಚಯವಾದ ವಯಸ್ಸನ್ನು ಹೇಳಲು ನಾನು ಪ್ರಯತ್ನಿಸುವದಿಲ್ಲ. ಯಾಕಂದರೆ ಯಾವುದೇ ವಯಸ್ಸನ್ನು ಬೈಬಲು ನಿರ್ಧರಿಸಿರುವದಿಲ್ಲ. ಬೇರೆಬೇರೆ ಯಾವ ಜನರಲ್ಲಿ ಇದು ಭಿನ್ನವಾದದ್ದಾಗಿರುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಇದು ಯಾಕೆ ಮರಣದಂತೆ ಸೂಚಿಸಲ್ಪಟ್ಟಿದೆ? ಯಾಕಂದರೆ ಆತ್ಮವು ದೇವರಿಂದ

ಬೇರ್ಪಡಿಸಲ್ಪಟ್ಟು, ಮತ್ತು ಶಿಕ್ಷೆ ಹೊಂದುವ ಸ್ಥಿತಿಯಲ್ಲಿರುತ್ತದೆ. ಅದು ಆತ್ಮಿಕ ಜೀವದಿಂದ, ದೇವರೊಂದಿಗಿನ ಅನ್ಯೋನ್ಯ ಐಕ್ಯತೆಯಿಂದ ಕಡಿಯಲ್ಪಟ್ಟಿರುತ್ತದೆ. ಪ್ರೇರಿತ ಬರಹಗಾರರಿಂದ ಹೇಳಲ್ಪಟ್ಟ ಅನೇಕ ವಿಷಯಗಳು ಈಗ ಸ್ಪಷ್ಟವಾಗುತ್ತವೆ. ಎಫೆಸದಲ್ಲಿದ್ದ ಕ್ರೈಸ್ತರು ತಮ್ಮ ಪಾಪಗಳಲ್ಲಿ ಸತ್ತು ಹೋಗಿದ್ದಾರೆಂದು ಪೌಲನು ಹೇಳಿದನು (ಎಫೆಸ 2:1). ಅವನು ಅದನ್ನೇ ಕೊಲೊಸ್ಸೆಯವರಿಗೂ ಹೇಳಿದನು (ಕೊಲೊಸ್ಸೆ 2:13). ಕ್ರೈಸ್ತರು ಮರಣದಿಂದ ಜೀವಕ್ಕೆ ದಾಟಿದ್ದಾರೆ ಎಂದು ಯೋಹಾನನು ಹೇಳಿದನು (1 ಯೋಹಾನ 3:14). ಆದಾಮ, ಹವ್ವರು ತಾವು ತಿಂದ ದಿನದಂದು ಹೇಗೆ ಸತ್ತರು ಎಂಬುದನ್ನು ಸಹ ಇದು ಸ್ಪಷ್ಟಪಡಿಸುತ್ತದೆ. ಆತ್ಮಿಕ ಮರಣದ ತತ್ವವನ್ನು ನಾವು ಅರ್ಥ ಮಾಡಿಕೊಳ್ಳುವಾಗ, ಕೊನೆಗೆ ಯೇಸು ಹೇಳಿದ ಅದ್ಭುತಕರವಾದ ಹೇಳಿಕೆಯ ಅರ್ಥ ನಮಗಾಗುತ್ತದೆ. “ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಸತ್ತವರು ದೇವಕುಮಾರನ ಧ್ವನಿಯನ್ನು ಕೇಳುವ ಕಾಲ ಬರುತ್ತದೆ, ಈಗಲೇ ಬಂದಿದೆ; ಕೇಳಿದವರು ಬದುಕುವರು” (ಯೋಹಾನ 5:25).

ಪಾಪದಲ್ಲಿ ಸತ್ತು ಹೋಗಿದ್ದ ಒಬ್ಬ ವ್ಯಕ್ತಿಯು ದೈಹಿಕವಾಗಿ ಸಾಯುತ್ತಿದ್ದ ಒಬ್ಬ ಸ್ನೇಹಿ ತನನ್ನು ಸಂದರ್ಶಿಸಿದನು. ಸಂದರ್ಶಕನು ಆಳವಾಗಿ ಸಹಾನುಭೂತಿ ತೋರಿಸುತ್ತಿದ್ದನು. ಆದರೆ ಸಾಯುತ್ತಿರುವವನು ನಂಬಿಗಸ್ತ ಕ್ರೈಸ್ತನಾಗಿದ್ದನು. ವಾಸ್ತವಿಕತೆಯಲ್ಲಿ ಕ್ರೈಸ್ತನು ತನಗಾಗಿ ಶೋಕ ವ್ಯಕ್ತಪಡಿಸುತ್ತಿದ್ದವನಿಗಿಂತ ಹೆಚ್ಚು ಉತ್ತಮವಾದ ಸ್ಥಿತಿಯಲ್ಲಿದ್ದನು.

## ಕೆಲವರು ಎರಡು ಸಲ ಸತ್ತು ಹೋಗಿದ್ದಾರೆ

ಕ್ರೈಸ್ತರಾದವರಾದ ನಾವು ಹಾಗೆ ಮಾಡುವಲ್ಲಿ ಸತ್ತು ಹೋಗಿದ್ದೇವೆ. ಮೊದಲಿನ ಮರಣವು ಪಾಪದಲ್ಲಿ ಇದ್ದರೆ, ಪಾಪಕ್ಕೆ ಸಾಯುವವರಾಗಿ ನಾವು ಕ್ರೈಸ್ತರಾಗಿದ್ದೇವೆ. “ಯಾಕಂದರೆ ನೀವು ಸತ್ತಿರಲ್ಲಾ” (ಕೊಲೊಸ್ಸೆ 3:3) ಎಂದು ಪೌಲನು ಹೇಳಿದನು. ರೋಮಾಪುರ 6:3, 4ರಲ್ಲಿ ಅದ್ಭುತಕರವಾದ ಮಾತುಗಳನ್ನು ಜ್ಞಾಪಿಸಿಕೊಳ್ಳಿರಿ. ರೋಮಾಪುರದಲ್ಲಿದ್ದ ಕ್ರೈಸ್ತರು ಯಾಕೆ ಪಾಪದಲ್ಲಿ ಜೀವಿಸುತ್ತ ಹೋಗುವದಿಲ್ಲ ಎಂಬುದನ್ನು ಪೌಲನು ತೋರಿಸಿದನು. ಅವರು ದೇವರ ಮಕ್ಕಳಾಗುವದಕ್ಕಿಂತ ಮೊದಲಿನ ಸಮಯದ ಕಡೆಗೆ ತೋರಿಸಿದನು. ಬಾಪ್ತಿಸ್ಮದಲ್ಲಿ ಕ್ರಿಸ್ತನ ಮರಣದಲ್ಲಿ ಅವರು ಹೂಣಲ್ಪಟ್ಟರು ಮತ್ತು ನೂತನ ಜೀವನಕ್ಕೆ ಎಬ್ಬಿಸಲ್ಪಟ್ಟರು ಎಂದು ಅವನು ಹೇಳಿದನು. ಬಾಪ್ತಿಸ್ಮ ಹೊಂದುವವರೆಗೆ ನೂತನ ಜೀವವು ಬರುವದಿಲ್ಲವೆಂದು ಇದು ನಿಶ್ಚಯವಾಗಿ ತೋರಿಸುತ್ತದೆ. ಆದರೆ ಅದು ಮರಣದಂತೆ ಯಾಕೆ ಸೂಚಿಸಲ್ಪಟ್ಟಿದೆ? ಯಾಕಂದರೆ, ದೇವರ ಮಕ್ಕಳಾಗುವದರಲ್ಲಿ ನಾವು ನಮ್ಮ ಪಾಪದ ಹಳೇ ಜೀವಿತದಿಂದ ಪ್ರತ್ಯೇಕಿಸಲ್ಪಡುವೆವು, ಹಳೇ ಮನುಷ್ಯನು ಕ್ರೂಜೆಗೆ ಹಾಕಲ್ಪಟ್ಟಿದ್ದಾನೆ.

## ಎಲ್ಲರೂ ದೈಹಿಕವಾಗಿ ಸಾಯುವರು

“ಒಂದೇ ಸಾರಿ ಸಾಯುವುದೂ ಆ ಮೇಲೆ ನ್ಯಾಯ ತೀರ್ಪೂ ಮನುಷ್ಯರಿಗೆ ನೇಮಕ ವಾಗಿದೆ” (ಇಬ್ರಿಯ 9:27); “... ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವ ರಾದರು ...” (1 ಕೊರಿಂಥ 15:22) ಇದು ಆತ್ಮವು ದೇಹವನ್ನು ಬಿಡುವಾಗ ಸಂಭವಿಸುವ ದೈಹಿಕ ಮರಣವಾಗಿದೆ, “ಆತ್ಮವಿಲ್ಲದ ದೇಹವು ಸತ್ತದ್ದಾಗಿದೆ” (ಯಾಕೋಬ 2:26).

ಮರಣದಂಡನೆಯು ಪ್ರತೀ ಮಾನವ ಜೀವಿಯ ಮೇಲಿದ್ದು, ಅದು ಬೇಗನೇ ಜಾರಿಗೊಳಿ ಸಲ್ಪಡುವುದು ಎಂಬುದನ್ನು ಅರಿತು ಕೊಳ್ಳಲಿಕ್ಕೆ ಅನೇಕರಿಗೆ ಕಷ್ಟಕರವಾಗುತ್ತದೆ. ಜೀವನದ

ಅಲ್ಪ ಕಾಲವನ್ನು ಮರಣದ ನಿಶ್ಚಿತತೆಯನ್ನು ನಮ್ಮ ಮನಸ್ಸಿಗೆ ನಾಟುವಂತೆ ಹೇಳಲು ಬೈಬಲು ಅನೇಕ ರೂಪಗಳನ್ನು ಉಪಯೋಗಿಸಿರುತ್ತದೆ. "ನಮ್ಮ ಆಯುಷ್ಕಾಲವು ಎಪ್ಪತ್ತು ವರ್ಷ; ಬಲ ಹೆಚ್ಚಿದರೆ ಎಂಭತ್ತು. ಕಷ್ಟ ಸಂಕಟಗಳೇ ಅದರ ಆಡಂಬರ, ಅದು ಬೇಗನೇ ಗತಿಸಿ ಹೋಗುತ್ತದೆ; ನಾವು ಹಾರಿ ಹೋಗುತ್ತೇವೆ" (ಕೀರ್ತನೆ 90:10). ಅಲ್ಪ ಸಮಯದಲ್ಲಿಯೇ ನಮ್ಮಲ್ಲಿ ಪ್ರತಿಯೊಬ್ಬರೂ ಮರೆತು ಹೋದ ಸತ್ತವರ ನಿದ್ರೆಯಲ್ಲಿ ನಿದ್ರಿಸುತ್ತಿರುವೆವು. ಅಗೋಚರವಾದ ಬೇರೆ ಲೋಕಕ್ಕೆ ಇದು ದೂರವಾಗಿರುವದಿಲ್ಲ. ಮಾಂಸದ ತೆಳ್ಳಗಿನ ಪರದೆಯು ಮಾತ್ರವೇ ನಮ್ಮನ್ನು ಬೇರೆಯಾಗಿಲಿಸಿದೆ. ಒಂದು ಕ್ಷಣದಲ್ಲಿ, ಕಣ್ಣು ರೆಪ್ಪೆ ಒಂದು ಬಡಿಯುವದರೊಳಗಾಗಿ ನಾವು ಅಲ್ಲಿ ಇರುವೆವು. ಒಂದು ದಿನ ಕ್ರಿಸ್ತನು ಈ ವೈರಿಯನ್ನು ನಾಶಪಡಿಸುವನು (1 ಕೊರಿಂಥ 15:26). ಆದರೆ ಅಲ್ಲಿಯವರೆಗೆ ಎಲ್ಲಾ ಜನರೂ ದೈಹಿಕವಾಗಿ ಸಾಯತಕ್ಕದ್ದು.

## ಕೆಲವರು "ಎರಡನೆಯ ಮರಣವನ್ನು" ಎದುರಿಸುವರು

ಪರಿಶುದ್ಧ ಬರಹದಲ್ಲಿ ನಾವು ಚರ್ಚಿಸ ಬೇಕಾದ ಕೊನೆಯ ಮರಣವು "ಎರಡನೆಯ ಮರಣ" (ಪ್ರಕಟನೆ 20:14; 21:8). ಅದು ನಿತ್ಯಮರಣ, ಅದು ಮರಣ ಎಂದು ಯಾಕೆ ಕರೆಯಲ್ಪಟ್ಟಿದೆ? ಅದು ಪುನಃ ಬೇರ್ಪಡಿಸಲ್ಪಡುವ ವಿಚಾರ; ತಪ್ಪಿ ಹೋದವರು ದೇವರಿಂದ ಮತ್ತು ಆತ್ಮೀಕ ಜೀವನದಿಂದ ನಿತ್ಯವಾಗಿ ಬೇರ್ಪಡಿಸಲ್ಪಡುವರು, ಈ ಮರಣದಿಂದ ಪುನರುತ್ಥಾನವಿರುವದಿಲ್ಲ. ಅದು ಜೀವಿಸುವ ಮರಣ, ಸಾಯುತ್ತಿರುವ ಜೀವನ ಆಗಿರುವುದು. ಕ್ರಿಸ್ತನಿಗೆ ವಿಧೇಯರಾಗದೇ ಇರುವವರಿಗೆ ನಿತ್ಯವಾದ ಅಸ್ತಿತ್ವವಿರುವುದು. ಆದರೆ ನಿತ್ಯ ಜೀವವಿರುವದಿಲ್ಲ. ಜೀವ ಅಂದರೆ ದೇವರೊಂದಿಗೆ ಐಕ್ಯತೆ.

## ಮುಕ್ತಾಯ

ಯೇಸುವಿನಲ್ಲಿ ಮರಣದ ಮತ್ತು ಪಾತಾಳದ ಬೀಗದ ಕೈಗಳಿರುವವು (ಪ್ರಕಟನೆ 1:18). ಆತನು ಮರಣವನ್ನು ಜಯಿಸಿ ಅದರ ಮೇಲೆ ಬಲವನ್ನು ಹೊಂದಿರುವನು. ಆತನಲ್ಲಿ ಬೀಗದ ಕೈಗಳಿವೆ. ಸೆರೆಮನೆಗಳನ್ನು ಸಂದರ್ಶಿಸಿದ್ದೇನೆ; ಆದರೆ ಬೀಗದ ಕೈಗಳುಳ್ಳ ಮನುಷ್ಯನ ಪಕ್ಕದಲ್ಲಿ ನಡೆದು ಹೋಗುತ್ತಿರುವ ತನಕ ನನಗೆ ಯಾವ ಭಯವಿರುವದಿಲ್ಲ. "ಇಗೋ ... ಬೀಗದ ಕೈಗಳು ನನಲ್ಲಿವೆ" ಎಂದು ಯೇಸು ಯೋಹಾನನಿಗೆ ಹೇಳಿದನು. ಮರಣವು ಹಾಗೂ ಪಾತಾಳದ ಬೀಗದ ಕೈಗಳಿರುವಾತನೊಂದಿಗೆ ನಡೆಯುವುದು ಭಯವನ್ನು ತೆಗೆದು ಹಾಕುತ್ತದೆ. ಯೇಸುವು ನಮ್ಮ ಸ್ನೇಹಿತನಾಗಿದ್ದಾನೆ. ನಾವು ಆತನಿಗೆ ನಂಬಿಗಸ್ತರಾಗಿದ್ದರೆ, "ಮರಣದ ನೆರಳಿನ ಕಣಿವೆಯಲ್ಲಿ ನಡೆಯುವಾಗಲೂ" ನಾವು ಭಯಪಡಬೇಕಾಗಿಲ್ಲ (ಕೀರ್ತನೆ 23:4). ಆತನ ಕೋಲು ದೊಣ್ಣೆಯೂ ಬೀಗದ ಕೈಗಳೂ ನಮಗೆ ಆದರಣೆ ಕೊಡುತ್ತವೆ.

© 2009 Truth for Today